

| | | |
|---|---|---|
| ಚಿತ್ರ | : | **ಅರ್ಜುನ್ ರೆಡ್ಡಿ** |
| ನಿರ್ದೇಶನ | : | **ಸಂದೀಪ್ ರೆಡ್ಡಿ ವಂಗ** |
| ಛಾಯಾಗ್ರಹಣ | : | **ಹುಸೈನ್ ಜಫ್ರಿನ್** |
| ಭಾಷೆ | : | **ತೆಲುಗು** |

ಕುರಿತು ಆ ಅಜ್ಜಿ ಆಡುವ ಮಾತು ಅಲ್ಲಾಡಿಸಿಬಿಡುತ್ತದೆ.

ಎಲ್ಲಕ್ಕೂ ಕಳಶವಿಟ್ಟಂತೆ ರಾಧನ್ ಸಂಗೀತ ಸಂಯೋಜನೆ ಚಿತ್ರಕ್ಕೆ ಒದಗಿಬಂದಿದೆ. ರಾಜು ತೋಟ ಸಿನಿಮಾಟೋಗ್ರಫಿಗೆ ಕ್ಲೋಸಪ್ ಕೆಲಸವೇ ಹೆಚ್ಚು. ಹಿನ್ನೆಲೆ ಸಂಗೀತದಲ್ಲಿ ಬಳಕೆಯಾಗಿರುವ ಪಾಶ್ಚಿಮಾತ್ಯ ವಾದ್ಯ ಸಂಗೀತ, ಹಾಡುಗಳಲ್ಲಿ ಬಳಸಿಕೊಂಡಿರುವ ಕರ್ನಾಟಕ ಶಾಸ್ತ್ರೀಯ ಸಂಗೀತ, ಮಿಶ್ರ ಮಾಧುರ್ಯ ನಿರ್ದೇಶಕರ ಸೂಕ್ಷ್ಮತೆಗೆ ರಾಧನ್ ಸ್ಪಂದಿಸಿರುವ ರೀತಿಗೆ ಉದಾಹರಣೆಗಳು.

ಇಷ್ಟಾಗಿ ಇದನ್ನು ಪರಿಪೂರ್ಣ 'ಕಲ್ಟ್ ಸಿನಿಮಾ' ಎನ್ನಲಾಗದು. ಅಂತ್ಯದಲ್ಲಿ ವಿಪರೀತ ಎನ್ನಬಹುದಾದ ಮೆಲೋಡ್ರಾಮಾ ಇದೆ. ಮೂರು ಅಂತ್ಯಗಳನ್ನು ಚಿತ್ರಕ್ಕೆಂದು ನಿರ್ದೇಶಕರು ಬರೆದಿದ್ದರಂತೆ. ಇನ್ನೆರಡು ಯಾವುದೆನ್ನುವುದು ತಿಳಿದಿಲ್ಲ.

ನಿರೂಪಣೆಯಲ್ಲಿ ಬಹು ಫ್ಲ್ಯಾಷ್‌ಬ್ಯಾಕ್‌ಗಳನ್ನು ಬಳಸಿರುವ ರೀತಿ. ದೀರ್ಘವಾದರೂ ಸಾವಧಾನವಾಗಿ ಕಟ್ಟಿದ ಶಾಟ್‌ಗಳು, ಲಯ ಮೀರದ ಸಂಭಾಷಣೆ, ಔಚಿತ್ಯಕ್ಕೆ ಅಗತ್ಯವಾದ ಸನ್ನಿವೇಶಗಳು... ಜನಪ್ರಿಯ ಮಾದರಿಯಲ್ಲಿನ ಈ ಪ್ರಯೋಗ ಸ್ವಲ್ಪ ಅತ್ತಿತ್ತ ಆಗಿದ್ದರೂ ಕಷ್ಟವಿತ್ತು. ನಿರ್ದೇಶಕರ ಅಖಂಡ ಆತ್ಮವಿಶ್ವಾಸ ಇಲ್ಲದಿದ್ದರೆ ಇಂಥ ಸಿನಿಮಾ ತಯಾರಿಕೆ ಸಾಧ್ಯವಾಗುತ್ತಿರಲಿಲ್ಲ. ಸಿನಿಮಾದ ನಾಯಕನ ಆತ್ಮಗೌರವ ಹಾಗೂ ನಿರ್ದೇಶಕರ ಆತ್ಮವಿಶ್ವಾಸ ಎರಡಕ್ಕೂ ಸಾವಯವ ಸಂಬಂಧವಿದೆ.

❀